ಒ ಎಸ್ 119/2017 ಪಿ.ಡಬ್ಲ್ಯೂ 1

ಇಂದು ದಿಃ 05.08.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಇ ಎಂ ಕೆ ವಕೀಲರಿಂದಃ

ನಂಜನಗೂಡಿನಲ್ಲಿ ವಾಸವಿರುವ ಬಗ್ಗೆ ಪಡಿತರ ಚೀಟಿ ಇದ್ದು ಅದರಲ್ಲಿ ನನ್ನ ಮತ್ತು ನನ್ನ ಗಂಡನ ಹೆಸರು ನಮೂದು ಇರುತ್ತದೆ. ಅದೇ ರೀತಿ ನನ್ನ ಗಂಡನ ಅಣ್ಣತಮ್ಮಂದಿರು ಪ್ರತ್ಯೇಕವಾಗಿ ರೇಷನ್ ಕಾರ್ಡು ಮಾಡಿಸಿದ್ದಾರೆ ಎಂದರೆ ಸರಿ. ನಾನು ಮದುವೆಯಾದ ನಂತರ ನನ್ನ ಗಂಡನ ಅಣ್ಣತಮ್ಮಂದಿರು ಒಂದೇ ಮನೆಯಲ್ಲಿ ವಾಸವಿದ್ದೆವು. ಆ ರೀತಿ ಒಟ್ಟಿಗೆ ಇದ್ದೆವು ಎಂದು ತೋರಿಸಲು ದಾಖಲೆ ಇಲ್ಲ. ಒಟ್ಟಿಗೆ ಇದ್ದಿದ್ದರೆ ಒಂದೇ ರೇಷನ್ ಕಾರ್ಡು ಮತ್ತು ಸರ್ಕಾರಿ ಎಲೆಕ್ಷನ್ ಕಾರ್ಡು ಇರುತ್ತಿತ್ತು ಎಂದರೆ ಇರಲಿಲ್ಲ ಎನ್ನುತ್ತಾರೆ. ಚುನಾವಣೆ ಗುರುತಿನ ಚೀಟಿಗಳು ಸಹ ಒಂದೆ ಮನೆಯ ವಿಳಾಸದಲ್ಲಿ ಇರುತ್ತವೆ ಎಂದರೆ ಸರಿ.

ಮಸಣಶೆಟ್ಟಿ ಆಸ್ತಿಯಲ್ಲಿ ಸಹ ನನಗೆ ಭಾಗ ಬರಬೇಕು . ಆದರೆ ಈ ದಾವೆಯಲ್ಲಿ ಮಸಣಶೆಟ್ಟಿಯವರ ಆಸ್ತಿಯನ್ನು ಸೇರಿಸಿಲ್ಲ. ಮಸಣಶೆಟ್ಟಿ ನನ್ನ ಗಂಡನ ಚಿಕ್ಕಪ್ಪ. 16ನೇ ಐಟಂ ಆಸ್ತಿಯಲ್ಲಿ ನನಗೆ ಭಾಗ ಬರುವುದಿಲ್ಲ. ಭಾಗ ಬರುವುದಿಲ್ಲ ಎಂದು ಗೊತ್ತಿದ್ದರು ಸಹ ಪ್ರತಿವಾದಿಗಳಿಗೆ ತೊಂದರೆ ನೀಡಲು ಸುಳ್ಳು ದಾವಾ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸಿದ್ದಶೆಟ್ಟಿಯವರ ಆಸ್ತಿಯಲ್ಲಿ ನನ್ನ ಗಂಡನಿಗೆ ಯಾವ ಆಸ್ತಿ ಹಕ್ಕು ಇಲ್ಲ ಎಂದರೆ ಸರಿಯಲ್ಲ. 16ನೇ ಆಸ್ತಿಯ ಸಿದ್ದಶೆಟ್ಟಿಯವರ ಆಸ್ತಿಯಾಗಿದ್ದು ಅದನ್ನು ಅವರು 18ನೇ ಪ್ರತಿವಾದಿಗೆ ಧಾನ ಮಾಡಿದ್ದು ಅದರಲ್ಲಿ ನನಗೆ ಪಾಲು ಬೇಕು ಎಂದು ಕೇಳಿರುತ್ತೇನೆ. 18ನೇ ಆಸ್ತಿಯು ಸಹ 18ನೇ ಪ್ರತಿವಾದಿಯ ಸ್ವಯರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಿದ್ದಶೆಟ್ಟಿಯವರ ವಿರುದ್ದ ಒಂದು ಕ್ರಿಮಿನಲ್ ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿ. ಈ ದಾವಾ 1ನೇ ಐಟಂ ಆಸ್ತಿಯಲ್ಲಿ ನಾವು ಭತ್ತ ಬೆಳೆಯುತ್ತಿರುವಾಗ ಸಿದ್ದಶೆಟ್ಟಿಯವರು ಬಂದು ನನಗೆ ತೊಂದರೆ ಕೊಟ್ಟರು ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಆ ಆಸ್ತಿಯನ್ನು ನನಗೆ ಕೃಷಿಗೆ ಕೊಟ್ಟಿದ್ದರು. 1ನೇ ಐಟಂ ಆಸ್ತಿಯಲ್ಲಿಯೂ ನನ್ನ ಯಜಮಾನರ ಪಾಲಿನ ಆಸ್ತಿಯನ್ನು ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಆ ಪಾಲಿನ 1ಎಕರೆ ಆಸ್ತಿಯಲ್ಲಿ ಈಗಲೂ ನಾನು ವ್ಯವಸಾಯ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ.

ನನ್ನ ಯಜಮಾನರ ತಂದೆಯಿಂದ ಪಿತ್ರಾರ್ಜಿತವಾಗಿ ಬಂದ ಆಸ್ತಿ ಎಂದರೆ ಸರ್ವೆ ನಂಬರ್ 97 ಮತ್ತು 98 ಇರುತ್ತವೆ. ಸರ್ವೆ ನಂಬರ್ 97 ಮತ್ತು 98ರ ಆಸ್ತಿಯ ಚೆಕ್ಕುಬಂದಿ ಅಂದರೆ ಐಟಂ ನಂಬರ್ 10, ಪೂರ್ವಕ್ಕೆ ಮೈಸೂರಿನವರ ಆಸ್ತಿ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಬಸವಶೆಟ್ಟಿಯವರ ಜಮೀನು, ದಕ್ಷಿಣಕ್ಕೆ ರಸ್ತೆ ಇರುತ್ತದೆ. ಬಸವಶೆಟ್ಟಿಯವರ ಪರಿಚಯ ನನಗೆ ಇಲ್ಲ. ಅವರು ಮೈಸೂರಿನವರು. 97ರ ಆಸ್ತಿಯ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಕರಳಾಪುರ ಗ್ರಾಮದಲ್ಲಿ ನಮ್ಮ ಊರಿನ ಜನಾಂಗದ ಯಜಮಾನರು ಇದ್ದಾರೆ ಮತ್ತು ಅವರ

ಪರಿಚಯ ನನಗೆ ಇದೆ. ನಾವೆಲ್ಲ ಒಟ್ಟು ಕುಟುಂಬದಲ್ಲಿ ಇದ್ದೇವೆ ಎಂದು ನಮ್ಮ ಊರಿನ ಹಿರಿಯವರಿಗೆ ಗೊತ್ತು. ಅವರು ನನ್ನ ಜೊತೆ ವಿಶ್ವಾಸದಲ್ಲಿ ಇದ್ದಾರೆ. ಅವರನ್ನು ನ್ಯಾಯಾಲಯಕ್ಕೆ ನನ್ನ ಪರವಾಗಿ ಸಾಕ್ಷಿ ನುಡಿಸಲು ತೊಂದರೆ ಇಲ್ಲ. ಯಾವುದೇ ಜಮೀನನ್ನು ಖರೀದಿಸಿಲ್ಲ ಎಂದರೆ ಸುಳ್ಳು. ನನ್ನ ಯಜಮಾನರ ತಂದೆಯ ತಂದೆಗೆ ಯಾವುದೇ ಪಿತ್ರಾರ್ಜಿತ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ. ಅವರು ಕೊಂಡು ಕೊಂಡ ಆಸ್ತಿಯನ್ನು ವಿಲ್ ಮೂಲಕ ಹಂಚಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡನ ಅಣ್ಣತಮ್ಮಂದಿರು ಹಂಚಿಕೊಳ್ಳುವ ಒಟ್ಟು ಕುಟುಂಬದ ಆಸ್ತಿ ಯಾವುದು ಇಲ್ಲ ಎಂದರೆ ಸರಿಯಲ್ಲ. ಆದ ಕಾರಣ ದಾವಾ ಆಸ್ತಿಯಲ್ಲಿ ವಿಭಾಗ ಕೇಳುವ ಹಕ್ಕು ನನಗೆ ಇಲ್ಲ ಎಂದರೆ ಸರಿಯಲ್ಲ. ವಿಲ್ ಮೂಲಕ ಕೊಟ್ಟ ಆಸ್ತಿಯ ಚಾಲ್ತಿಯಲ್ಲಿ ಬಂದಿದೆ ಮತ್ತು ಅವರವರ ಆಸ್ತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾವೆಲ್ಲ 1ನೇ ಪ್ರತಿವಾದಿಯನ್ನು ಸೇರಿ ನಾವೆಲ್ಲರೂ ಚೆನ್ನಾಗಿದ್ದೇವೆ. ನನ್ನ ಯಜಮಾನರ ಅಣತಮ್ಮಂದಿರನ್ನು ಸಾಕ್ಷಿ ಮಾಡಲು ತೊಂದರೆ ಇಲ್ಲ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.